ಆ) ಬೆಂಗಳೂರು ನಗರ ವ್ಯಾಪ್ತಿಯಿಂದ ನೆಲಮಂಗಲದವರೆವಿಗೂ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ಅನ್ನು ಜೋಡಿ ರಸ್ತೆಯನ್ನಾಗಿ ಮಾಡಲಾಗಿದೆ. ಹಾಗೂ ಬೆಂಗಳೂರು ಹೊಸೂರು ಭಾಗದ ರಾಷ್ಟ್ರೀಯ ಹೆದ್ದಾರಿಯನ್ನು ಜೋಡಿ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಅರಸೀಕೆರೆ ತಾಲ್ಲೂಕ್ ಗಂಡಸಿ ಗ್ರಾಮಕ್ಕೆ ಬಸ್ ಸ್ಟ್ಯಾಂಡ್

೯೫೫ (೧೬೦೦) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗಂಡಸಿ ಕ್ಷೇತ್ರದ ಪ್ರಮುಖ ಸ್ಥಳವಾದ ಗಂಡಸಿಗೆ ಬಸ್ ಸ್ಟ್ಯಾಂಡ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಹೊಸದಾಗಿ ನಿರ್ಮಾಣ ಕಟ್ಟಿಸುವಂತಹ ಯೋಜನೆಯನ್ನು ಈ ಮುಂಗಡ ಪತ್ರದಲ್ಲಿ ಸೇರಿಸಲಾಗಿದೆಯೇ ?

ಇ) ಯೋಜನೆಯ ಅಂದಾಜು ಮೊತ್ತವೆಷ್ಟು, ಬೇಕಾಗುವ ಸ್ಥಳವೆಷ್ಟು ಮತ್ತು ಸ್ಥಳವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬಂದಿದೆ.

ಆ) ಇಲ್ಲ ಆದರೆ ಈ ಯೋಜನೆಯನ್ನು ತೆಗೆದುಕೊಳ್ಳಲು ಪರಿಗಣಿಸಲಾಗುವುದು.

ಇ) ಉದ್ಭವಿಸುವುದಿಲ್ಲ ೧೮೦ x ೨೦೦ ಅಡಿ ನಿವೇಶನವನ್ನು ಸಂಸ್ಥೆಯು ವಶಕ್ಕೆ ಪಡೆದುಕೊಳ್ಳಲಾಗಿದೆ.

ರಾಜ್ಯದಲ್ಲಿರುವ ರಸ್ತೆಗಳಿಗೆ ಮೆಂಟೆನೆನ್ಸ್ ಗ್ರಾಂಟ್ ಕೊಡುವ ಬಗ್ಗೆ

೯೫೬ (೧೫೯೮) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ರಸ್ತೆಗಳನ್ನು ಎಷ್ಟು ದರ್ಜೆಗಳನ್ನಾಗಿ ವಿಂಗಡಿಸಲಾಗಿದೆ ಮತ್ತು ಯಾವ ಯಾವ ದರ್ಜೆಯ ರಸ್ತೆಗಳಿಗೆ ಮೆಂಟೆನೆನ್ಸ್ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ?

ಆ) ಗ್ರಾಮಾಂತರ ಪ್ರದೇಶದ ಜಿಲ್ಲಾ ಪರಿಷತ್ ರಸ್ತೆಗಳಿಗೆ ಮೆಂಟೆನೆನ್ಸ್‌ಗೆ ಎಷ್ಟು ಹಣವನ್ನು ಪ್ರತಿ ಕಿಲೋ ಮೀಟರ್‌ಗೆ ಒದಗಿಸಲಾಗುತ್ತಿದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ರಸ್ತೆಗಳ ದರ್ಜೆ		ವ್ಯಾಪ್ತಿ	ನಿವ ಹಣೆಗೆ ೧೯೯೭-೯೮ ರಲ್ಲಿ ನಿಗದಿಪಡಿಸಿರುವ ಅನುದಾನ (ಲಕ್ಷ ರೂ. ಗಳಲ್ಲಿ)
೧.	ರಾಷ್ಟ್ರೀಯ ಹೆದ್ದಾರಿ	ಅ)	ನಗರಮಿತಿ ರಾಜ್ಯ ಸರ್ಕಾರ	೮೦.೦೦
		ಆ)	ನಗರದ ಹೊರಗೆ ಕೇಂದ್ರ ಸರ್ಕಾರ	ಇನ್ನೂ ನಿಗದಿಪಡಿಸಿಲ್ಲ (ಕೇಂದ್ರ ಸರ್ಕಾರ)

1	2	3	4
೨.	ರಾಜ್ಯ ಹೆದ್ದಾರಿ	ರಾಜ್ಯ ಸರ್ಕಾರ	
೩.	ಮುಖ್ಯ ಜಿಲ್ಲಾ ರಸ್ತೆ	(ಲೋಕೋಪಯೋಗಿ ಇಲಾಖೆ)	೨೮೬೮.೫೧
೪.	ಇತರ ಜಿಲ್ಲಾ ರಸ್ತೆ	ಜಿಲ್ಲಾ ಪರಿಷತ್ತು	೨೧೯.೮೫
೫.	ಹಳ್ಳಿ ದರ್ಜೆ ರಸ್ತೆ	ಜಿಲ್ಲಾ ಪರಿಷತ್ತು	
	ಅ) ಜಿಲ್ಲಾ ಪರಿಷತ್ತು		೧೬೦೨.೬೯
	ಆ) ಆಯಕಟ್ಟು ರಸ್ತೆ	ರಾಜ್ಯ ಸರ್ಕಾರ (ನೀರಾವರಿ ಇಲಾಖೆ)	೩೨೦.೮೪

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯು ಇತರ ಜಿಲ್ಲಾ ರಸ್ತೆಗೆ ಪ್ರತಿ ಕಿ.ಮಿ. ಗೆ ೭,೦೦೦-೦೦ ರೂ. ಗಳಂತೆ, ಹಾಗೂ ಹಳ್ಳಿ ರಸ್ತೆಗೆ. ಪ್ರತಿ ಕಿ ಮಿ ಗೆ ೩೫೨೬-೦೦ ರೂ. ಗಳಂತೆ ಆಗುತ್ತದೆ. ನೀರಾವರಿ ಇಲಾಖೆ ವ್ಯಾಪ್ತಿಯು ಆಯಕಟ್ಟು ರಸ್ತೆಗಳಿಗೆ ಪ್ರತಿ ಕಿ.ಮಿ ಗೆ ೪೯೩೦-೦೦ ರೂ. ಗಳಂತೆ ಆಗುತ್ತದೆ.

ಹಳೆಯ ಮೈಸೂರಿನಲ್ಲಿರುವ ಕೆರೆಗಳಲ್ಲಿ ಹೂಳು ತುಂಬಿರುವ ಬಗ್ಗೆ

೯೫೭ (೧೬ಳಳಿ) ಶ್ರೀ ಜೆ. ಸಿ. ಮಾಧು ಸ್ವಾಮಿ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಳೇ ಮೈಸೂರು ಪ್ರಾಂತ್ಯದಲ್ಲಿ ಬಹಳ ಹಿಂದೆ ಕಟ್ಟಿರುವ ನೀರಾವರಿ ಕೆರೆಗಳ ಹೂಳು ಮುಚ್ಚಿರುವುದು ಹಾಗೂ ಇದರಿಂದಾಗಿ ಅಚ್ಚುಕಟ್ಟುದಾರರಿಗೆ ನಿರೀಕ್ಷಿಸಿದ ಮಟ್ಟಕ್ಕೆ ನೀರು ಹೋಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ ಹೂಳು ತೆಗೆಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ ?

ಇ) ಹಾಗಿದ್ದಲ್ಲಿ ಯೋಜನೆಯ ವಿವರಗಳೇನು ?

ಈ) ಅಚ್ಚು ಕಟ್ಟು ವಿಸ್ತೀರ್ಣ ಕಾಲಕಾಲಕ್ಕೆ ಹೆಚ್ಚಾಗುತ್ತಿರುವುದರ ಕಡೆಗೆ ಗಮನದಲ್ಲಿ ಇದೆಯೇ ?

ಉ) ವಿಸ್ತೀರ್ಣಕ್ಕೆ ಅನುಗುಣವಾಗಿ ಅಚ್ಚುಕಟ್ಟಿನಲ್ಲಿ ಬೆಳೆಯುವ ಬೆಳೆಯನ್ನು ನಿರ್ಧರಿಸಲಾಗುತ್ತಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಈ ವರ್ಷದ ಆಯವ್ಯಯದಲ್ಲಿ ರೂ. ೪೦ ಲಕ್ಷ ಹೂಳೆತ್ತುವ ಸಲುವಾಗಿ ಒದಗಿಸಲಾಗಿದೆ.

ಇ) ದೇವನಹಳ್ಳಿ ತಾಲ್ಲೂಕು ತಟ್ಟಮಾಚೇನಹಳ್ಳಿ ಕೆರೆಯಲ್ಲಿ ೨೨ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಪ್ರಾಯೋಗಿಕವಾಗಿ ಹೂಳು ತೆಗೆಯುವ ಪ್ರಸ್ತಾವನೆ ಇದ್ದು ಈ ಕಾಮಗಾರಿಯ ಅಂದಾಜು ಸರ್ಕಾರದ ಪರಿಶೀಲನೆಯಲ್ಲಿದೆ. ಉಳಿದ ಕೆರೆಗಳ ಅನ್ವೇಷಣಾ ಕಾರ್ಯ ನಡೆದಿದೆ.

ಈ) ಬಂದಿದೆ.

ಉ) ಅಚ್ಚುಕಟ್ಟಿನಲ್ಲಿ ಬೆಳೆಯುವ ಬೆಳೆಯನ್ನು ಕೆರೆಯಲ್ಲಿರುವ ನೀರಿನ ಲಭ್ಯತೆಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ.